ಹಾಗೂ ಸನ್ಮಾನ್ಯ ಗೃಹ ಸಚಿವರು ಹೇಳಿಕೆಯನ್ನು ನೀಡಿದ್ದಾರೆ. ಆದರೆ ಗುಟುಕಾ ಮಾರಾಟ ನಿಷೇಧ ಆಗುವುದಿಲ್ಲ ಎಂದು ಜನರಲ್ಲಿ ಸಂಶಯ ಎದ್ದಿದೆ. ಏಕೆಂದರೆ, ಒಂದನೆಯದಾಗಿ, ಸೇಲ್ಸ ಟ್ಯಾಕ್ಸ ಡಿಪಾರ್ಟಮೆಂಟಿನ ಈ ಚೆಕ್ ಪೋಸ್ಟ್‌ಗಳಿಂದ ಯಾವುದೇ ಬಿಲ್ ಇಲ್ಲದೆ ಆಗುವಂಥ ಈ ವ್ಯವಹಾರದಲ್ಲಿ ಪಾಸ್ ಆಗಬೇಕಾದರೆ ಕನಿಷ್ಠ 2 ಲಕ್ಷ ರೂಪಾಯಿ ಮಾಮೂಲು ನಡೆಯುತ್ತದೆ. ಆದ್ದರಿಂದ ಈ ಅಧಿಕಾರಿಗಳು ಇದನ್ನು ಖಂಡಿತ ನಿಷೇಧ ಮಾಡುವುದಕ್ಕೆ ಬಿಡುವುದಿಲ್ಲ. ಎರಡನೆಯದಾಗಿ, ಸರ್ಕಾರದ ಉನ್ನತ ಮಟ್ಟದಲ್ಲಿ ಒಂದು ತರಹದ ವ್ಯವಹಾರಗಳು ನಡೆಯುತ್ತಿದೆ. ಇದಕ್ಕೆ ಸಂಬಂಧಪಟ್ಟ ಮಾರಾಟಗಾರರನ್ನು ಕರೆಸಿ, ಒಂದೊಂದು ಕಂಪನಿಯವರು ಎರಡು ಕೋಟಿ ಕೊಟ್ಟರೆ, ಇದನ್ನು ನಿಷೇಧ ಮಾಡುವುದಿಲ್ಲ ಎಂದು ಹೇಳುವಂಥ ಮಾತುಗಾರಿಕೆ ನಡೆದಿದೆ ಎಂಬ ಸಂಶಯ ಜನರಲ್ಲಿ ಇದೆ. ಇದರ ಬಗ್ಗೆ ಸರ್ಕಾರ ಸ್ಪಷ್ಟವಾಗಿ ಉತ್ತರ ಕೊಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಗುಟುಕಾ ಸೇವನೆ ಬಗ್ಗೆ ನಿನ್ನೆ ದಿವಸ ವಿಧಾನ ಪರಿಷತ್ತಿನಲ್ಲಿ ಸುದೀರ್ಘ ಚರ್ಚೆ ನಡೆದಿದೆ. ಅದಕ್ಕೆ ಒಂದು ಸಮಿತಿಯನ್ನು ರಚನೆ ಮಾಡಲು ಸರ್ಕಾರ ನಿರ್ಧಾರ ಮಾಡಿದೆ. ಗುಟ್ಕಾದಲ್ಲಿ ಮಾದಕ ವಸ್ತು ಇದೆಯೋ ಇಲ್ಲವೋ ಎನ್ನತಕ್ಕಂಥದು ವೈಜ್ಞಾನಿಕ ವಿಚಾರ ಆಗಿರುವುದರಿಂದ ತಜ್ಞರ ಸಮಿತಿಯನ್ನು ರಚನೆ ಮಾಡಿ, ಕಾರ್ಕೊಟಿಕ್ ಆಕ್ಟನೊಳಗಡೆಯಾಗಲೀ ಅಥವಾ ಫುಡ್ ಅಡಲ್ಟ್ರೇಷನ್ ಆಕ್ಟ ವ್ಯಾಪ್ತಿಯಲ್ಲಿ ಬರದೇ ಇರುವುದರಿಂದ ಅದನ್ನು ನಿಷಿದ್ಧ ಮಾಡುವುದಕ್ಕೆ ಏನು ಸಾಧ್ಯ ಇದೆ, ಅಥವಾ ಅದರ ಸಾಧಕ ಬಾಧಕಗಳನ್ನು ಚರ್ಚೆ ಮಾಡಿ ಸಮಿತಿ ವರದಿ ಆಧಾರದಮೇಲೆ ನಾವು ಕ್ರಮ ಕೈಗೊಳ್ಳುತ್ತೇವೆ. ಇದ್ದಕ್ಕಿಂತ ಹೆಚ್ಚಾಗಿ ಮಾನಸಿಕ ವಾದಂಥ ನಿರ್ಧಾರ, ಪ್ರಬಲವಾದಂಥ ನಿರ್ಧಾರ, ಪ್ರಮುಖ ವಾದಂಥ ವಿಚಾರ ಆಗಿರುವುದರಿಂದ ಸಮಿತಿಯನ್ನು ರಚನೆ ಮಾಡಲಿಕ್ಕೆ ಈಗಾಗಲೇ ಒಪ್ಪಿಕೊಂಡಿದ್ದೇವೆ. ವರದಿಯ ಆಧಾರದ ಮೇಲೆ ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು : ಒಳ್ಳೆಯದು

## (ಒ) ವಿಷಯ ಸಮಿತಿಗಳು ಆಸ್ತಿತ್ವದಲ್ಲಿರಬೇಕೇ ಅಥವಾ ಬೇಡವೇ ಎನ್ನುವ ವಿಚಾರ

ಶ್ರೀ ಬಿ.ಬಿ. ಶಿವಕುಮಾರು (ಕೆರೆಗೋಡು) : ಸನ್ಮಾನ್ಯ ಸಭಾಧ್ಯಕ್ಷರೆ, ತಮ್ಮ ಮೂಲಕ ಈ ದಿವಸ ಶೂನ್ಯವೇಳೆಯಲ್ಲಿ ಒಂದು ಗಹನವಾದಂತಹ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ, ಅದು ನಮ್ಮ ಸಭಾನಾಯಕರು ಇಲ್ಲಿ ಇರುವಾಗ ಅವಕಾಶ ಕೊಟ್ಟಿದ್ದೀರಿ, ಪ್ರಾಯಶಃ ನಾನು ಒಂದು ಮಾತನ್ನು ಹೇಳಬೇಕೆಂದು ನನಗೆ ಇಚ್ಛೆ ಆಗುತ್ತದೆ. ಈ ಸದನದಲ್ಲಿ ಸುಮಾರು ಶೇಕಡ 10 ಜನ ಹಿರಿಯ ಶಾಸಕರನ್ನು ಬಿಟ್ಟರೆ, ಎಲ್ಲಾ ಪಕ್ಷಗಳಿಂದಲೂ ಕೂಡ ಹೊಸ ಮುಖಗಳು ಆಸಕ್ತಿಯಿಂದ ಕೆಲಸ ಮಾಡಬೇಕು ಎನ್ನತಕ್ಕಂಥ ಸದಸ್ಯರು ಬಂದಿರತಕ್ಕಂಥ ಈ ಸಮಯದಲ್ಲಿ ಅದರಲ್ಲೂ ಕೂಡ ತಾವು ಆ ಸ್ಥಾನ ಅಲಂಕರಿಸಿದ ಮೇಲೆ, ಇದು ಮುಖಸ್ತುತಿಗೆ ಹೇಳುವಂಥ ಮಾತಲ್ಲ. ಹಲವಾರು ಜಟಿಲವಾದ ಸಮಸ್ಯೆಗಳನ್ನು ಯಾವುದಾದರೂ ಪಕ್ಷದವರು ಎತ್ತಿದಂಥ ಕಾಲದಲ್ಲೂ ಕೂಡ ತಾವು ಒಂದು

ನಿರ್ದಿಷ್ಟವಾದಂಥ ಉತ್ತರವನ್ನು ಒದಗಿಸಿಕೊಡುವುದರಲ್ಲಿ ನಮ್ಮವರಿಗೂ ಕೂಡ ಸಫಲತೆಯನ್ನು ಕಲ್ಪಿಸಿ ಕೊಟ್ಟಿದ್ದೀರಿ. ನಾವೆಲ್ಲರೂ ಕೂಡ ಅದಕ್ಕೆ ತಮಗೆ ಆಭಾರಿ ಆಗಿದ್ದೇವೆ ಎನ್ನುವಷ್ಟಂಥ ಮಾತನ್ನು ಹೇಳುತ್ತೇನೆ. ಈಗ ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟ ಪಡುತ್ತೇನೆ. ಈ ಪ್ರಸಕ್ತ ಸಾಲಿನಲ್ಲಿ ತಾವು ನನ್ನನ್ನು ಅಂದಾಜು ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಈ ಸಮಿತಿಗಳ ಅಸ್ತಿತ್ವ ಬೇಕೇ ಅಥವಾ ಬೇಡವೇ ಎನ್ನುವುದು ನನ್ನ ಮೂಲ ಪ್ರಶ್ನೆ. ಈಗ ಮುಂದಿನ ಬಜೆಟ್ ಅಧಿವೇಶನದಲ್ಲಿ ತಾವು ಸಮಿತಿಗಳನ್ನು ಪುನರ್ ರಚನೆ ಮಾಡುವವರಿದ್ದೀರಿ. ಇದುವರೆಗೂ ಕೂಡ ಹಿಂದೆ ಯಾವ ಸಮಿತಿಗಳು ಕೆಲಸ ಮಾಡಿರಬಹುದು, ಅದು ವಿಷಯ ಸಮಿತಿಯಾಗಿರಬಹುದು ಅಥವಾ ಶಾಸಕಾಂಗದ ವ್ಯಾಪ್ತಿಯಲ್ಲಿ ಬರತಕ್ಕಂಥ ಸ್ಟ್ಯಾಚ್ಯೂಸರಿ ಬಾಡೀಸ್ ಇರಬಹುದು, ಅವು ಸರ್ಕಾರದಮುಂದೆ ಸಲ್ಲಿಸಿದಂಥ ವರದಿ ಮೇಲೆ ಸರ್ಕಾರ ತೆಗೆದುಕೊಂಡಿರತಕ್ಕಂಥ ಕ್ರಮ ಏನು ಎನ್ನತಕ್ಕಂಥದ್ದು ಮೂಲ ಪ್ರಶ್ನೆ. ಇವರಲ್ಲಿ ರಾಜಾಕಾರಣ ಇಲ್ಲ. ಒಬ್ಬ ರಾಜಕಾರಣಿ ಯಾವ ವ್ಯವಹಾರದಲ್ಲಿ ಅವ್ಯವಹಾರ ಮಾಡಿರಲಿ ಅಥವಾ ಒಬ್ಬ ಅಧಿಕಾರಿ ಮಾಡಿರಲಿ ಭ್ರಷ್ಟಾಚಾರ ಇವತ್ತು ಏನು ಆಗಿದೆ ಅಂದರೆ, ನಾನು ಇವತ್ತು ಅಂದಾಜು ಸಮಿತಿಯ ಅಧ್ಯಕ್ಷನಾಗಿ ನನಗೆ 15 ಜನ ಸದಸ್ಯರು ಇದ್ದಾರೆ. ಒಂದು ಸಭೆಯನ್ನು ಮಾಡಿದರೆ ಸುಮಾರು 30 ರಿಂದ 40 ಸಾವಿರ ರೂಪಾಯಿ ಒಂದು ವಾರಕ್ಕೆ ಖರ್ಚಾಗುತ್ತದೆ. ಒಂದು ತಿಂಗಳಿಗೆ 3 ಅಥವಾ 4 ಸಭೆಗಳನ್ನು ಮಾಡಿದರೆ ಒಂದೂವರೆ ಲಕ್ಷ ರೂಪಾಯಿಗಳು ಒಂದು ತಿಂಗಳಿಗೆ ಖರ್ಚಾಗುತ್ತದೆ. ಹಾಗೆ 10 ತಿಂಗಳು ಮಾಡಿದರೆ ಸುಮಾರು 15 ಲಕ್ಷ ಆಗುತ್ತದೆ. ಪ್ರವಾಸ ಎಂದು ಹೇಳಿ ತಾವು ಕೊಟ್ಟಿರತಕ್ಕಂಥ ಸೌಲಭ್ಯ ಇಡೀ ರಾಜ್ಯಸ್ಥಂತ, ಇಡೀ ರಾಷ್ಟ್ರವ್ಯಂತ ಹೋದರೆ ಅದು ಎಷ್ಟು ಲಕ್ಷ? ಇನ್ನೆಲ್ಲಾ ನಾನು ಏಕೆ ಹೇಳುವುದಕ್ಕೆ ಇಷ್ಟ ಪಡುತ್ತೇನೆ ಎಂದರೆ ಒಂದು ಸಮಿತಿಗೆ ಇಷ್ಟು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ, ತಾವು ರಚನೆ ಮಾಡಿದಂತಹ ಸಮಿತಿ ಅದೇ ರೀತಿ ಬೇರೆ ಸಮಿತಿಗಳು ಕೊಟ್ಟಂತಹ ವರದಿಗಳು ಇವತ್ತು ಅವು ಎಲ್ಲಿವೆ? ಯಾವ ಗೋಡೌನ್‌ನಲ್ಲಿ ಇವೆ ಎನ್ನತಕ್ಕಂಥಾದ್ದು ಪ್ರಶ್ನೆ. ಯಾವುದಾದರೂ ಒಂದು ಸಮಿತಿಯ ವರದಿ ಬಗ್ಗೆ ಒಂದು ನಿರ್ದಿಷ್ಟವಾದಂತಹ ಕ್ರಮವನ್ನು ಸರ್ಕಾರ ತೆಗೆದುಕೊಂಡಿದೆಯೇ? ಉದಾಹರಣೆಗೆ 1993-94ರ ಅಂದಾಜು ಸಮಿತಿಯ ಪುಸ್ತಕ ನನ್ನ ಹತ್ತಿರ ಇದೆ. ಈಗ ತಮ್ಮ ಮುಂದೆ ನಾನು ವರದಿಯನ್ನು ಸಲ್ಲಿಸುವವನಿದ್ದೇನೆ. ತಮ್ಮ ಮೂಲಕ ಸರ್ಕಾರಕ್ಕೆ ಈ ಕೆಲವು ವಿಚಾರಗಳನ್ನು ಹೇಳಬೇಕು ಎಂದರೆ ಅಂದು ಆ ಸಮಿತಿಯ ಅಧ್ಯಕ್ಷರಾದವರು ಒಂದು ಪಕ್ಷದ ಪ್ರಮುಖರು. ಅವರು ಮಾಡಿರುವ ಆಪಾದನೆ ಕೂಡ ಅದೇ ಪಕ್ಷದಲ್ಲಿ ಅಧಿಕಾರದಲ್ಲಿ ಇದ್ದಂಥ ಮಂತ್ರಿಗಳ ಮೇಲೆ 1993-94ರ ಅಂದಾಜು ಸಮಿತಿಯ ವರದಿಯ ಮೇಲೆ ಪೇಜ್ 9ರಲ್ಲಿ ಈ ರೀತಿ ಇದೆ. ಮಾನ್ಯ ಅಧ್ಯಕ್ಷರೆ ನನಗೆ ಕಾಲ ಕಡಿಮೆ ಇದೆ. ನಾನು ಬೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುತ್ತಾ ಇರುವುದರಿಂದ ಇದನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಡುತ್ತೇನೆ. ಅದರಲ್ಲಿ ಪೇಜ್ 9ರಲ್ಲಿ ಒಂದು ಬೈಟ್ ಫಿಲ್ಡ್ ಆಯಿಂಟ್‌ಮೆಂಟ್ ಎಂಬ ವಿಚಾರವಿದ್ದು, ಅದರಲ್ಲಿ ಸ್ಪಷ್ಟವಾಗಿ ಇದೆ. ಹಣದ ದುರುಪಯೋಗ ಅಧಿಕಾರಿಗಳಿಂದ ಇರಬಹುದು ಅಥವಾ ಸರ್ಕಾರದಲ್ಲಿ ಇರತಕ್ಕಂಥ ಪ್ರಭಾವಿ ವ್ಯಕ್ತಿಗಳಿಂದ ನಡೆದಿರಬಹುದು ಅನ್ನುವುದನ್ನು ಅಲ್ಲಿ ಕಾಣಿಸಿದೆ.